ಸತ್ಯವಾದಿ
SATYAVADI

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಸಕ್ಕರೆ ಸಿಗದಿದ್ದಕ್ಕೆ ಸನ್ಯಾಸ!

ಪ್ರ. ಪ್ರ. ಸಭೆ

ಮೈಸೂರು ಪ್ರಜಾಪ್ರತಿನಿಧಿ ಸಭೆ ನಿನ್ನೆ ಮಧ್ಯಾಹ್ನ ಆಹಾರ ಪರಿಸ್ಥಿತಿ ಬಗ್ಗೆ ಚರ್ಚಿಸಿತು. ಶ್ರೀ ವಿ ವೆಂಕಟಪ್ಪನವರು ಸಭಾಧ್ಯಕ್ಷತೆ ವಹಿಸಿದ್ದರು ಮೈಸೂರು ಆಹಾರ ಪರಿಸ್ಥಿತಿಯನ್ನು ಕುರಿತು ತಿಳಿಸುತ್ತಾ, ಆಹಾರ ಧಾನ್ಯಗಳಿಗಾಗಿ ಅಪಾರ ಧನ ವ್ಯಯವಾಗುತ್ತಿದೆ ಆಹಾರ ಸ್ವಾವಲಂಬಿಗಳಾಗಬೇಕೆಂದು ಭಾರತ ಸರ್ಕಾರ ಆಗಲೇ ನಿಶ್ಚಯಿಸಿದೆ ಸಂಸ್ಥಾನದಲ್ಲಿ 40 ಲಕ್ಷಕ್ಕೆ ಮೇಲ್ಪಟ್ಟು ಪಡಿತರ ಕ್ರಮಕ್ಕೆ ಬದ್ಧರಾಗಿದ್ದಾರೆ ಆಹಾರ ಸಮಸ್ಯೆಗೆ ರಾಜಕೀಯ ವರ್ಣಕೊಡದೆ ರಚನಾತ್ಮಕ ಸಲಹೆ ಕೊಡಬೇಕು ಎಂದರು ಮಾನ್ಯ ಸದಸ್ಯರನೇಕರು ಅಮೂಲ್ಯ ಸಲಹೆಗಳನ್ನಿತ್ತರು ಮಾನ್ಯ ಸಚಿವರು ಸಲಹೆಗಳನ್ನು ಗಮನಿಸುವುದಾಗಿ ತಿಳಿಸಿದರು ಸಭೆ 7 ಗಂಟೆಗ ಮುಗಿಯಿತು

ಬೆಂಗಳೂರಿನಲ್ಲಿ ಗುರೂಜಿ ವಿರುದ್ಧ ಸಮಾಜವಾದಿಗಳು ಕಪ್ಪು ಬಾವುಟ ಪ್ರದರ್ಶನ ನೂಡಿದರು 37 ಮಂದಿಯನ್ನು ದಸ್ತಗಿರಿ ಮಾಡಿ ನಂತರ ಬಿಡುಗಡೆ ಮಾಡಲಾಯಿತು.

ಮುಂದಿನ ತಿಂಗಳು ವಾರ ಪ್ರಥಮದಲ್ಲಿ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಂಯುಕ್ತ ಸಭೆ ಸಚಿವ ಮಂಡಲ ಪುನರ್ರಚನೆ ಬಗ್ಗೆ ವಿವರ ಕೊಡುವುದಾಗಿ ಶ್ರೀ ಕೆ ಸಿ ರೆಡ್ಡಿ ಪ್ರತಿನಿಧಿ ಸಭೆ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತಿಳಿಸಿರುವರು.

ವೀರಗಂನಲ್ಲಿ ಮೊನ್ನೆ ಸರ್ದಾರ್ ಪಟೇಲರ ವರ್ಧಂತಿಯ ಸಾರ್ವಜನಿಕ ಸಭೆ [illegible] ಸೇರಿದವೆಂದು 7 ಮುಸ್ಲಿಂ ಪ್ರಾಂತ್ಯದ ಹಲವು ಕಡೆ ಬರುಗಾಳಿ ಅನಾಹುತಕ್ಕೀಡಾದವರ ಪರಿಹಾರಕ್ಕಾಗಿ ಮದರಾಸು ಸರ್ಕಾರ ರೂ 245000 ಮಂಜೂರ್ಮಾಡಿದೆ.

ಮೈಸೂರು — ಇಂದಿನಿಂದ ಯುನಸ್ಕೋ ಏರ್ಪಡಿಸಿರುವ ಸಮಾರಂಭ ಮುಕ್ತಾಯ ಅಧಿವೇಶನಕ್ಕೆ ಪಂ. ನೆಹರು ಬರುವ ನಿರೀಕ್ಷಣೆ ಇದೆ.

ಲಷ್ಕರ್ ಮೊಹಲ್ಲದ ಎ ಮತ್ತು ಬಿ ಡಿವಿಜ್ ಇನ್ಸ್ಪೆಕ್ಟರ್‌ರವರು ತಮ್ಮ ಸಿಬ್ಬಂದಿಯೊಡನೆ ಹೋಗಿ ಕಮಾನಿದರ್ವಾಜ ಬಳಿಯಿರು 3238 ನೇ ನಂಬರ ಮನೆಯಲ್ಲಿ ಗೋವಧೆ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿ ಮಹಮದ್ ಇನೂಷ್ ಮತ್ತಿತರರ ಮೇಲೆ ಮುಂದಿನ ತನಿಖೆ ಕ್ರಮ ನಡೆಸುತ್ತಿದ್ದಾರೆ

ಮೈಸೂರು ದೇಶದ ಶ್ರೇಷ್ಠಕಂವಾದ ಶ್ರೀ ವರದಾಂಜತೇಯ ದೇವರ ಧರ್ಮ ಸಂಸ್ಥೆಯಿಂದ ಇಕ್ಕೇರಿ ಅಘೋರೇಶ್ವರ ಸ್ವಾಮಿ ದೇವಾಲಯದಲ್ಲಿ 5 ನೇ ತಾರೀಖು ರಾತ್ರಿ 8 ಗಂಟೆಗೆ ಒಂದು ಲಕ್ಷ ದೀಪೋತ್ಸವ ಸಮಾರಂಭವನ್ನು ಜರುಗಿಸಬೇಕಾಗಿ ಶ್ರೀ ವರದಾಂಬ ಅಮ್ಮನವರ ಪ್ರೇರಣೆಯಿಂದ ನಿಶ್ಚಯಿಸಿರುತ್ತೇನೆ ದ್ರವ್ಯ ಧಾನ್ಯ ಧರ್ಮ ಸಹಾಯಗಳಿಂದ ಪುಣ್ಯಭಾಗಿಗಳಾಗಬೇಕಾಗಿ ಪ್ರಾರ್ಥನೆ ಎಂದು ಗೌ। ಕಾರ್ಯದರ್ಶಿ ಶ್ರೀ ಎಂ ಪಿ ಲಕ್ಷ್ಮಣಪ್ಪ ಇಕ್ಕೇರಿ ಮೇಲಿನ ಮನೆ ಜನೊಂದಾರ್ ತಿಳಿಸುತ್ತಾರೆ

ಪ್ರಪಂಚದಲ್ಲಿ ವರ್ಣ ವಿದ್ವೇಶ ಅಳಿದ ಹೊರತು ಶಾಂತಿ ಸಾಧ್ಯವಿಲ್ಲ ಎಂದು ನೆ[illegible] ಸಾರ್ ಫ್ರಾನ್ಸಿಸ್ಕೋದ[illegible] ಶ್ರೀಮತಿ ಭಾಷಣದ[illegible]

ಕಪ್ಪುಧ್ವಜಾಲಾವನ್ನು ಪೂರ್ವ ಪಂಜಾಬಿನ ರಾಜಧಾನಿ ಮಾಡಿರೆಂದು ನಿಯೋಗವೊಂದು ಪೂ ॥ ಪಂಜಾಬು ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿತು

ಭಾರತ ಪ್ರಾಣಿಶಾಸ್ತ್ರದ ಸರ್ವೇ ಶಾಖೆ ಕಲ್ಕತ್ತಾದಲ್ಲಿ 58 ಸಹಸ್ರ ಚಿಟ್ಟೆಗಳ ಪ್ರದರ್ಶನ ಏರ್ಪಡಿಸಲಿದೆ

ಮರಣ ದಂಡನೆಯನ್ನು ಜೀವಾವಧಿ ಶಿಕ್ಷೆಗೆ ಬದಲಾಯಿಸಬೇಕೆಂದು ನಾರಾಯಣ ಅಸಟೆ ಗವರ್ನರ ಜನರಲ್‌ರನ್ನು ಪ್ರಾರ್ಥಿಸಿರುವ ವರದಿ ಅಂಬಾಲದಿಂದ ಬಂದಿದೆ

ಮಧ್ಯಪ್ರಾಂತ್ಯ ಸರಕಾರವು ಹಿಂದಿಯು 1950 ಜನವರಿಯಿಂದ ಸರಕಾರಿ ಭಾಷೆಯಾಗುವಂತೆ ಮಾಡಬೇಕೆಂದು ನಿರ್ಧರಿಸಿದೆ

ಪ್ರತಿ ದಿನ 100 ತೊಲಾ ಬೆಳ್ಳಿ ಗಟ್ಟಿ ಮತ್ತು 10000 ಭೂಲೆ ಬಂಗಾರ ವ್ಯಾಪಾರವಾಗುತ್ತಿದೆಯೆಂದು ರಿಜರ್ವ್ ಬ್ಯಾಂಕು ಘೋಷಿಸಿದೆ

ಸೆಮಿನಾರ್ ಆರಂಭ

ಭಾರತ ವಿದ್ಯಾ ಸಚಿವ ಶ್ರೀ ಮೌಲಾನಾ ಅಬುಲ್ ಕಲಂ ಅಜಾದರು ವಯಸ್ಕ ವಿದ್ಯಾಭ್ಯಾಸ ಸೆಮಿನಾರ್ ಉದ್ಘಾಟನೆಯನ್ನು ಈ ಮಧ್ಯಾಹ್ನ ಜಗನ್ಮೋಹನ ಅರಮನೆಯಲ್ಲಿ ನೆರವೇರಿಸಿದ್ದರು [illegible] ಇಂದ್ರಶೇಖರ

ಸಾಂದರ

ಹೆಚ್ಚು ಬೆಳೆಯಸಿ

ಗ್ರಂಥಕರ್ತರು ದೇಶಹಳ್ಳಿ ಶ್ರೀ ಯುತರು ಗೋವು ಕಥೆಯ ಶೈಲಿಯಲ್ಲಿ ಹಳ್ಳಿಗರಿಗೂ ಕೂಡ ಹೆಚ್ಚು ಬೆಳೆಯನ್ನು ಬೆಳೆಯ ಬೇಕಾದ ಅವಶ್ಯಕತೆಯು ಮನ ದಟ್ಟಾಗುವ ರೀತಿಯಲ್ಲಿ ಬರೆದಿರುವ ಗ್ರಂಥ. ವ್ಯವಸಾಯ ಕಾರ್ಯದಲ್ಲಿ ನಿರ ತರಾಗಿರುವವರೆಲ್ಲರೂ ಈ ಗ್ರಂಥವನ್ನು ಪಠಿಸಿ, ಹೆಚ್ಚಾಗಿ ಆಹಾರಧಾನ್ಯಗಳನ್ನು ಬೆಳೆಸುವುದರ ಮೂಲಕ ಜನಸೇವೆ ಜನಾರ್ದನ ಸೇವೆಗಳಲ್ಲಿ ನಿರತರಾಗಲೆಂದು ಆಶಿಸುತ್ತೇವೆ ಮೈಸೂರು ಅಹಾರ ಸಚಿವ ಶ್ರೀ ಮುರಿಯಪ್ಪನವರು ಮುನ್ನುಡಿ ಬರೆದಿದ್ದಾರೆ. ಈ ಗ್ರಂಥವನ್ನು ಬೆಂಗಳೂರು ನಗರದ ಚಾಮರಾಜಪೇಟೆ 3 ನೇ ರಸ್ತೆಯಲ್ಲಿನ ಸ್ವತಂತ್ರ ಮುದ್ರಣಾಲಯದಿಂದ ಪಡೆಯಬಹುದು. ಬೆಲೆ 3 ಆಣೆ.

L. N. Press

for Quality Printing

Sivarampet, Mysore

Protect the Cow

ಗೋರಕ್ಷಣೆ ನಡೆಯಲಿ

Edited, Printed and Published by M. S. Krishna Rao, at the Satyavadi Press, Chamrajpuram Mysore

ಶ್ರೀರಾಮ್ಸ್

29—10—49 ರಿಂದ

Doosri Shadi

ಮುಂತಾಜ್ ಶಾಂತಿ, ಕುಮಾರ್

ಪ್ರಮೋದ್, ಡೇವಿಡ್ ಪಾತ್ರವಹಿಸಿರುವ

ದೂಸ್ರಿ ಶಾದಿ

ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಆಟಗಳು

Opera— Daily 3 Shows

SON OF ZORRO

4—11—49 ರಿಂದ

ಧರ್ಮಾಂಗದ

(ಅಮೋಘ ತೆಲುಗು ಚಿತ್ರ)

ಸತ್ಯವಾದಿ

ದಿನಪತ್ರಿಕೆ

ಹಿಂಗಳಿಗೆ ಸ್ಥಳದಲ್ಲಿ 6 ಆಣೆಗಳು

ಹೊರಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ



— ಬ್ರಿಟಾನಿಯಾ ಪಿಲ್ಮ್ಸ್ ಪ್ರಧಿ

ಮೈಸೂರು ಅಪೇರಾ ಟಾಕೀಸ್‌ನಲ್ಲಿ

4-11-1949 ರಿಂದ ❁ ಅಮೋಘ ಆರಂಭ

ಸ್ವಾಸ್ತಿಕ್ ರವರ :

ಧರ್ಮಾಂಗದ

ಅಮೋಘ ತೆಲುಗು ಚಿತ್ರ

ಪಾತ್ರವರ್ಗ : * ಕೃಷ್ಣವೇಣಿ, * ಋಷ್ಯೇಂದ್ರಮಣಿ, * ಡಾ. ಸುಬ್ಬರಾವ್, * ಲಿಂಗಮೂರ್ತಿ

ಂಗಳಂ